ಕರ್ನಾಟಕ ಸರ್ಕಾರ

ವಿಷಯ: ಶ್ರೀ ವೈ.ಎನ್.ರಂಗನಾಥ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮ

ಓದಲಾಗಿದೆ: 1. ಕಾರಣ ಕೇಳುವ ನೋಟೀಸು ಸಂಖ್ಯೆ: ಗ್ರಾಅಪ/123/ವಿಸೇಬಿ/2014 ದಿನಾಂಕ:11-06-2014.
2. ಶ್ರೀ ವೈ.ಎನ್.ರಂಗನಾಥ್, ಇವರ ಲಿಖಿತ ಹೇಳಿಕೆ ದಿ:15-07-2014
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಪತ್ರ ಸಂಖ್ಯೆ: ತುಜಿಪ/ಅಭಿ/ಎಂಜಿಎನ್ಇಜಿಏಆರ್/ದೋಷಾರೋಪಪಟ್ಟಿ /02/2014-2015 ದಿ: 02-02-2015.

-----

ಪ್ರಸ್ತಾವನೆ:

ಶ್ರೀ ವೈ.ಎನ್.ರಂಗನಾಥ್, ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಚಿತ್ರದುರ್ಗ ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದರೆನ್ನಲಾದ ಈ ಕೆಳಕಂಡ ಕರ್ತವ್ಯಲೋಪ ಆಪಾದನೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ), ನಿಯಮಾವಳಿಗಳು 1957ರ ನಿಯಮ 12(1) (ಎ) ರಡಿಯಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕಾರಣ ಕೇಳುವ ನೋಟೀಸಿನೊಂದಿಗೆ ಆರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು. :-

ಆರೋಪ-1:-

ಶ್ರೀ ವೈ.ಎನ್.ರಂಗನಾಥ್, ಆದ ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಂಜಿಎನ್ಆರ್ಇಜಿಎ ಯೋಜನೆಯಡಿ ಎಂಜಿಎನ್ಆರ್ಇಜಿಎ ಯೋಜನೆಯ ಮಾರ್ಗಸೂಚಿ ಮತ್ತು ಸುತ್ತೋಲೆಗಳನ್ವಯ ಕ್ರಿಯಾ ಯೋಜನೆಯನ್ನು ತಾಲ್ಲೂಕು ಪಂಚಾಯತಿ/ ಜಿಲ್ಲಾ ಪಂಚಾಯತಿಯಿಂದ ಪೂರ್ವಾನುಮೋದನೆ ಪಡೆದು ನಂತರ ಕಾಮಗಾರಿಯನ್ನು ಅನುಷ್ಠಾನಗೊಳಸಬೇಕಾಗಿರುತ್ತದೆ. 2010-11 ನೇ ಸಾಲಿನಲ್ಲಿ ಪಾವಗಡ ತಾಲ್ಲೂಕಿನ ಬೂದಿಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಯರ್ರಮ್ಮನಹಳ್ಳಿ ಗ್ರಾಮದ ಸ.ನಂ. 45/1 ರ ಪಿಕಪ್ ನಿರ್ಮಾಣಕಾಮಗಾರಿಗೆ ತಾಲ್ಲೂಕು ಪಂಚಾಯತಿ/ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಪಡೆಯದೆ ಅನುಷ್ಠಾನಗೊಳಿಸಿದ್ದರೂ ಸಹ ತಾಲ್ಲೂಕು ಮಟ್ಟದ ಕಾರ್ಯಾಕ್ರಮಾಧಿಕಾರಿ ಯಾದ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ.ಪಾವಗಡ ಇವರು ಇದನ್ನು ಪರಿಶೀಲಿಸಿ ಕಾಮಗಾರಿಯನ್ನು ಸ್ಥಗಿತಗೊಳಸದೆ ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(1) ನ್ನು ಉಲ್ಲಂಘಿಸಿರುತ್ತಾರೆ.

ಆರೋಪ-2:-

ಶ್ರೀ ವೈ.ಎನ್.ರಂಗನಾಥ್, ಆದ ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಂಜಿಎನ್ಆರ್ಇಜಿಎ ಯೋಜನೆಯಡಿ ಎಂಜಿಎನ್ಆರ್ಇಜಿಎ ಯೋಜನೆಯ ಮಾರ್ಗಸೂಚಿ ಮತ್ತು ಸುತ್ತೋಲೆಗಳನ್ವಯ ಕಾಮಗಾರಿಯನ್ನು ಅನುಷ್ಠಾನಗೊಳಸುವ ಮೊದಲು ಸದರಿ ಕಾಮಗಾರಿಯ ಅಂದಾಜು ಪಟ್ಟಿಗೆ- ಆಡಳತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದು ನಂತರ ಅನುಷ್ಠಾನಗೊಳಸಬೇಕಾಗಿರುತ್ತದೆ. ಆದರೆ 2010-11 ನೇ ಸಾಲಿನಲ್ಲಿ ಪಾವಗಡ ತಾಲ್ಲೂಕಿನ ಬೂದಿಬೆಟ್ಟ

ಗ್ರಾಮ ಪಂಚಾಯತಿ ವ್ಯಾಪ್ತಿಯ ಯರ್ರಮ್ಮನಹಳ್ಳಿ ಗ್ರಾಮದ ಸ.ನಂ.. 45/1 ರ ಪಿಕಪ್ ನಿರ್ಮಾಣ ಕಾಮಗಾರಿ ಕಾಮಗಾರಿಯನ್ನು ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆಯದೆ ಅನುಷ್ಠಾನಗೊಳಿಸಿದ್ದು ತಾಲ್ಲೂಕು ಮಟ್ಟದ ಕಾರ್ಯಕ್ರಮಾಧಿಕಾರಿಯಾದ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ.ಪಾವಗಡ ಇವರು ಇದನ್ನು ಪರಿಶೀಲಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸದೆ ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(1) ನ್ನು ಉಲ್ಲಂಘಿಸಿರುತ್ತಾರೆ.

ಆರೋಪ-3:-

ಶ್ರೀ ವೈ.ಎನ್.ರಂಗನಾಥ್, ಆದ ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಂಜಿಎನ್ಆರ್ಇಜಿಎ ಯೋಜನೆಯ ಮಾರ್ಗಸೂಚಿಗಳಂತೆ ಗ್ರಾಮ ಪಂಚಾಯತಿಯವರು ಅನುಷ್ಠಾನಗೊಳಿಸಲಾದ ಕಾಮಗಾರಿಯ ಕೂಲಿ ಕಾರ್ಮಿಕರ ಕೂಲಿ ಹಣ ಮತ್ತು ಸಾಮಗ್ರಿ ಮೊತ್ತವನ್ನು ಪಾವತಿಸುವ ಮೊದಲು ತಾಲ್ಲೂಕು ಮಟ್ಟದ ಕಾರ್ಯಕ್ರಮಾಧಿಕಾರಿಯಿಂದ ಅನುಮೋದನೆ ಪಡೆದು ಪಾವತಿಸಬೇಕಾಗಿರುತ್ತದೆ. ಆದರೆ, 2010-11 ನೇ ಸಾಲಿನಲ್ಲಿ ಪಾವಗಡ ತಾಲ್ಲೂಕಿನ ಬೂದಿಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಯರ್ರಮ್ಮನಹಳ್ಳಿ ಗ್ರಾಮದ ಸ.ನಂ.. 45/1 ರ ಪಿಕಪ್ ನಿರ್ಮಾಣ ಕಾಮಗಾರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಹಣ ಪಾವತಿಸಿದ್ದರೂ ತಾಲ್ಲೂಕು ಮಟ್ಟದ ಕಾರ್ಯಕ್ರಮಾಧಿಕಾರಿಯಾದ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ.ಪಾವಗಡ ಇವರು ಇದನ್ನು ಪರಿಶೀಲಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸದೆ ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(1) ನ್ನು ಉಲ್ಲಂಘಿಸಿರುತ್ತಾರೆ.

ಆರೋಪ-4:-

ಶ್ರೀ ವೈ.ಎನ್.ರಂಗನಾಥ್, ಆದ ಇವರು ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಂಜಿಎನ್ಆರ್ಇಜಿಎ ಯೋಜನೆಯಡಿ ಎಂಜಿಎನ್ಆರ್ಇಜಿಎ ಯೋಜನೆಯ ಮಾರ್ಗಸೂಚಿ ಮತ್ತು ಸುತ್ತೋಲೆಗಳನ್ವಯ ಯಾವುದೇ ಕಾಮಗಾರಿಯನ್ನು ಅನುಷ್ಠಾನಗೊಳಿಸಿದಾಗ ಕೂಲಿ ಕಾರ್ಮಿಕರ ಕೂಲಿ ಹಣವನ್ನು ಅವರ ಬ್ಯಾಂಕ್ ಖಾತೆಗಳಿಗೆ ಆನ್‌ಲೈನ್ ಮೂಲಕ ಜಮಾ ಮಾಡಬೇಕಾಗಿರುತ್ತದೆ. ಅಂತೆಯೇ ಸಾಮಗ್ರಿಗಳ ಮೊತ್ತವನ್ನು ಸಾಮಗ್ರಿಗಳನ್ನು ಸರಬರಾಜು ಮಾಡಿದ ನೈಜ ಸರಬರಾಜುದಾರರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕಾಗಿದೆ. ಆದರೆ, 2010-11 ನೇ ಸಾಲಿನಲ್ಲಿ ಪಾವಗಡ ತಾಲ್ಲೂಕಿನ ಬೂದಿಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಯರ್ರಮ್ಮನಹಳ್ಳಿ ಗ್ರಾಮದ ಟಿಜಿ. 45/1 ರ ಪಿಕಪ್ ನಿರ್ಮಾಣಕಾಮಗಾರಿ ಸಾಮಗ್ರಿಗಳ ಮೊತ್ತವನ್ನು ನೈಜ ಸರಬರಾಜುದಾರರಿಗೆ ಪಾವತಿಸದೆ ಫೋರ್ಜರಿ ಬ್ಯಾಂಕ್ ಖಾತೆಗೆ ರೂ. 3,34,074/- ಗಳನ್ನು ಜಮಾ ಮಾಡಿ ಸರ್ಕಾರಿ ಹಣವನ್ನು ಲಪಟಾಯಿಸಲು ಪ್ರಯತ್ನಿಸಿದ್ದರು ಸಹ ತಾಲ್ಲೂಕು ಮಟ್ಟದ ಕಾರ್ಯಕ್ರಮಾಧಿಕಾರಿಯಾದ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ.ಪಾವಗಡ ಇವರು ಇದನ್ನು ಪರಿಶೀಲಿಸಿ ಕಾಮಗಾರಿಯನ್ನು ಸ್ಥಗಿತಗೊಳಿಸದೆ ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(1) ನ್ನು ಉಲ್ಲಂಘಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ವೈ.ಎನ್.ರಂಗನಾಥ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತಿ ಪಾವಗಡ ಇವರು ತಮ್ಮ ಮೇಲೆ ಮಾಡಲಾದ ಪ್ರತಿಯೊಂದು ಆರೋಪಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಲಿಖಿತ ಹೇಳಿಕೆ ನೀಡಿ ತಮ್ಮ ಲಿಖಿತ ಹೇಳಿಕೆ / ಸಮಜಾಯಿಷಿಯನ್ನು ಒಪ್ಪಿ ಆರೋಪಮುಕ್ತಗೊಳಿಸಲು ಕೋರಿರುತ್ತಾರೆ.

ಆರೋಪ-1ಕ್ಕೆ ವಿವರಣೆ:

ಪಾವಗಡ ತಾ.ಪಂ. ಯಲ್ಲಿ ಕಾನಿಅ ಆಗಿ ದಿನಾಂಕ: 17-02-2010 ರಿಂದ ಅಂದರೆ 2010-11 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ್ದು ಪ್ರಸ್ತಾವಿತ ಕಾಮಗಾರಿಯು 2009-10ನೇ ಸಾಲಿನ ಕಾಮಗಾರಿಯಾಗಿದ್ದು, 2009-10ನೇ ಸಾಲಿನಲ್ಲಿಯೇ ಕೆಲಸವನ್ನು ನಿರ್ವಹಿಸಲಾಗಿದೆ. ಕಾಮಗಾರಿಯನ್ನು 2009-10ನೇ ಸಾಲಿನಲ್ಲಿಯೇ ಕೈಗೊಂಡಿರುವುದರಿಂದ ಸದರಿ ಕಾಮಗಾರಿಗೆ ಜಿ.ಪಂ. ಯಿಂದ / ತಾ.ಪಂ. ಯಿಂದ ಅನುಮೋದನೆ ಪಡೆಯುವುದು ಮತ್ತು ಕಾಮಗಾರಿಯನ್ನು ಸ್ಥಗಿತಗೊಳಿಸುವ ಪ್ರಮೇಯ ಇರುವುದಿಲ್ಲ. ಆದುದರಿಂದ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯ ಕ್ರಿಯಾ ಯೋಜನೆಗೆ ತಾ.ಪಂ. ಮತ್ತು ಜಿ.ಪಂ. ಗಳಿಂದ ಪೂರ್ವಾನುಮೋದನೆ ಪಡೆಯದೇ ಕೆಲಸವನ್ನು 2010-11ನೇ ಸಾಲಿನಲ್ಲಿ ಅನುಷ್ಠಾನಗೊಳಿಸಿದರೂ ಸಹ ಕಾಮಗಾರಿಯನ್ನು ಸ್ಥಗಿತಗೊಳಿಸದೇ ಕರ್ತವ್ಯಲೋಪವೆಸಗಲಾಗಿದೆ ಎಂಬ ಆರೋಪ ನಿರಾಧಾರವಾಗಿರುತ್ತದೆ.

ಆರೋಪ-2ಕ್ಕೆ ವಿವರಣೆ:

2010-11ನೇ ಸಾಲಿನಿಂದ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರುವುದರಿಂದ ಕಾಮಗಾರಿಯನ್ನು 2009-10ನೇ ಸಾಲಿನಲ್ಲಿ ತಾವು ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸುವ ಪೂರ್ವ ಕೈಗೊಳ್ಳಲಾಗಿದೆ. ಪ್ರಸ್ತಾವಿತ ಕಾಮಗಾರಿಯ ಅಂದಾಜು ಪಟ್ಟಿಯನ್ನು 2009-10ನೇ ಸಾಲಿನಲ್ಲಿಯೇ ತಯಾರಿಸಲಾಗಿದೆ ಮತ್ತು ರೂ. 10.00 ಲಕ್ಷಗಳ ವರೆಗಿನ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಜವಾಬ್ದಾರಿ ಗ್ರಾ.ಪಂ. ಗೆ ಇರುತ್ತದೆ. ಹಾಗೂ ತಾಂತ್ರಿಕ ಮಂಜೂರಾತಿ ನೀಡುವ ಹೊಣೆ ಪಂ.ರಾ.ಇಂ. ಇಲಾಖೆಗೆ ಇರುತ್ತದೆ. ಅದರಂತೆ ಸಂಬಂಧಿಸಿದವರು ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ ಮತ್ತು ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಬಿಲ್ಲಿಗೆ ಮೇಲೆ ಸಹಿ ಮಾಡಿರುತ್ತಾರೆ. ಆದ್ದರಿಂದ ಪ್ರಸ್ತಾವಿತ ಕಾಮಗಾರಿ ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದೆ ಪಡೆಯುದೇ ಕೆಲಸ ನಿರ್ವಹಿಸುವಲ್ಲಿ ಮತ್ತು ಕಾಮಗಾರಿಯನ್ನು ಸ್ಥಗಿತಗೊಳಿಸದೇ ಕರ್ತವ್ಯಲೋಪವೆಸಗಲಾಗಿದೆ ಎಂಬ ಆರೋಪ ನಿರಾಧಾರವಾಗಿರುತ್ತದೆ.

ಆರೋಪ-3 ಕ್ಕೆ ವಿವರಣೆ:

ಪ್ರಸ್ತಾವಿತ ಕಾಮಗಾರಿಯು 2009-10ನೇ ಸಾಲಿನ ಕಾಮಗಾರಿಯಾಗಿದ್ದು, 2009-10ನೇ ಸಾಲಿನಲ್ಲಿಯೇ ಅನುಷ್ಠಾನಗೊಂಡಿರುತ್ತದೆ. ಸದರಿ ಕಾಮಗಾರಿಗೆ 2009-10ನೇ ಸಾಲಿನಲ್ಲಿ ಹಣ ಪಾವತಿಯಾಗದ ಪ್ರಯುಕ್ತ 2010-11ನೇ ಸಾಲಿನಲ್ಲಿ ಸರ್ಕಾರದ ಆದೇಶದಂತೆ ಹಣ ಪಾವತಿಸಲು ಕ್ರಮ ವಹಿಸಲಾಗಿದೆ. ಸದರಿ ಕಾಮಗಾರಿಗೆ ಹಣ ಪಾವತಿಸಲು ಕಾರ್ಯಕ್ರಮ ಅಧಿಕಾರಿಯವರಾದ ತಮ್ಮಿಂದ ಅನುಮೋದನೆ ನೀಡಲಾಗಿದೆ. ಪ್ರಸ್ತಾವಿತ ಕಾಮಗಾರಿಯು 2009-10ನೇ ಸಾಲಿನಲಿಯೇ ಕೈಗೊಂಡಿರುವುದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸುವ ಪ್ರಮೇಯ ಬರುವುದಿಲ್ಲ. ತಮ್ಮ ಕರ್ತವ್ಯದ ಅವಧಿಯಲ್ಲಿ ಪ್ರಸ್ತಾವಿತ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. ಆದ್ದರಿಂದ ಪ್ರಸ್ತಾವಿತ ಕಾಮಗಾರಿಯನ್ನು 2010-11ನೇ ಸಾಲಿನಲ್ಲಿ ಕೈಗೊಂಡು ಅನುಮೋದನೆ ಇಲ್ಲದೆ ಹಣ ಪಾವತಿಸಲಾಗಿದ್ದರೂ ಸಹ ಕಾಮಗಾರಿಯನ್ನು ಸ್ಥಗಿತಗೊಳಿಸದೇ ಕರ್ತವ್ಯಲೋಪವೆಸಗಲಾಗಿದೆ ಎಂಬ ಆರೋಪ ನಿರಾಧಾರವಾಗಿರುತ್ತದೆ.

ಆರೋಪ-4ಕ್ಕೆ ವಿವರಣೆ:

ಕೂಲಿ ಕಾರ್ಮಿಕರಿಗೆ ಕೂಲಿ ಹಣವನ್ನು ಆನ್‌ಲೈನ್ ಮೂಲಕ ಕೂಲಿಕಾರರ ಮತ್ತು ಸಾಮಗ್ರಿ ಸರಬರಾಜುದಾರರ ಬ್ಯಾಂಕ್ ಖಾತೆಗೆ ಪಾವತಿಸುವ ಪದ್ಧತಿಯು 2010-11ನೇ ಸಾಲಿನಲ್ಲಿ ಜಾರಿಯಲ್ಲಿರುವುದಿಲ್ಲ. ಈ ಪದ್ಧತಿಯು 2011-12ನೇ ಸಾಲಿನಿಂದ ಜಾರಿಯಾಗಿರುತ್ತದೆ. ಹಣ ಪಾವತಿಯು 2009-10ನೇ ಸಾಲಿನಲ್ಲಿಯೇ ಕೈಗೊಂಡ ಕಾಮಗಾರಿಯಾಗಿರುವುದರಿಂದ ಕೆಲಸ ಸ್ಥಗಿತಗೊಳಿಸುವ ಪ್ರಮೇಯ ಬರುವುದಿಲ್ಲ. ಸದರಿ ಕಾಮಗಾರಿಯ ಸಾಮಗ್ರಿ ಮೊತ್ತದ ಚೆಕ್ ಫೋರ್ಜರಿ ಬ್ಯಾಂಕ್ ಖಾತೆಗೆ ಜಮಾ ಆಗಿರುವ ವಿಷಯ ತಿಳಿದ ತಕ್ಷಣ ಸಂಬಂಧಿಸಿದ ನೌಕರರು ಈ ಕೆಳಕಂಡಂತೆ ಕ್ರಮ ವಹಿಸಿರುವುದಾಗಿ ತಿಳಿಸಿರುತ್ತಾರೆ.

ಅ) ದಿನಾಂಕ: 7-1-2011 ರಂದು ನ್ಯಾಯಾಲಯ ರಂದು ನ್ಯಾಯಾಲಯ ನಿಂದನೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಿ.ಪಂ. ತುಮಕೂರು ಮತ್ತು ಬೆಂಗಳೂರಿಗೆ ಹೋಗಬೇಕಿದ್ದುದರಿಂದ ದಿನಾಂಕ: 7-1-2011 ರಂದು ಬೆಳಗ್ಗೆ 7.00 ಗಂಟೆಗೆ ಸಂಬಂಧಿಸಿದ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಯನ್ನು ಕರೆದು ಹಣ ಫೋರ್ಜರಿಯಾಗಿರುವ ವಿಷಯವನ್ನು ಮೌಖಿಕವಾಗಿ ತಿಳಿಸಿ, ಕೂಡಲೇ ಸಂಬಂಧಿಸಿದ ಬ್ಯಾಂಕ್ ಸಂಪರ್ಕಿಸಿ ಹಣ ಪಾವತಿಯಾಗದಂತೆ ಕ್ರಮವಹಿಸಲು ಸೂಚಿಸಿರುವುದಾಗಿ ಈ ವಿಷಯವನ್ನು ಸಂಬಂಧಿಸಿದ ಗ್ರಾ.ಪಂ. ಅಧಿಕಾರಿಯವರು ಪೋಲೀಸ್ ಉಪಾದೀಕ್ಷಕರು ಲೋಕಾಯುಕ್ತ ತುಮಕೂರು ರವರಿಗೆ ವಿಚಾರಣೆ ವೇಳೆ ಹೇಳಿಕೆ ನೀಡಿರುತ್ತಾರೆ.

ಆ) ಸದರಿ ಕಾಮಗಾರಿಯ ಹಣ ಫೋರ್ಜರಿಯಾಗಿರುವ ಬಗ್ಗೆ ಸಾಮಾಜಿಕ ಲೆಕ್ಕ ಪರಿಶೋಧಕರು, ಜಿ.ಪಂ. ತುಮಕೂರು ರವರು ದಿನಾಂಕ; 15-3-2011 ರಂದು ಗ್ರಾ.ಪಂ. ಬೂದಿಬೆಟ್ಟಕ್ಕೆ ಪರಿಶೀಲನೆ ನಡೆಸಿದ ವೇಳೆ ಗ್ರಾ.ಪಂ. ಆಡಳಿತಾಧಿಕಾರಿಯವರು ಹೇಳಿಕೆ ನೀಡಿ ತಮ್ಮ ಕಣ್ತಪ್ಪಿನಿಂದ ಫೋರ್ಜರಿಯಾಗಿ ಬ್ಯಾಂಕ್ ಖಾತೆಗೆ ಚೆಕ್ ಬರೆದಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ಇ) ಫೋರ್ಜರಿಯಾದ ಪ್ರಕರಣದಲ್ಲಿ ಚೆಕ್ ಬರೆಸಿಕೊಂಡಿರುವ ಶ್ರೀ ರಘುರಾಮರೆಡ್ಡಿಯವರು ಹಣ ವಾಪಸ್ಸ ಹಿಂದಿರುಗಿಸಲು ಒಪ್ಪಿ ಪತ್ರ ಬರೆದಿರುತ್ತಾರೆ.

ಈ) ಹಣ ಫೋರ್ಜರಿ ಪ್ರಕರಣದಲ್ಲಿ ಭಾಗಿಯಾಗಿರುವ ಗ್ರಾ.ಪಂ. ಅಧ್ಯಕ್ಷರು, ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ, ಫೋರ್ಜರಿ ಬ್ಯಾಂಕ್ ಖಾತೆದಾರರ ಹಾಗೂ ಇತರರ ವಿರುದ್ಧ ವೈ.ಎನ್.ಹೊಸಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕೂಲಿಕಾರರಿಗೆ ಮತ್ತು ಕಾಮಗಾರಿಯ, ನೈಜ ಸಾಮಗ್ರಿ ಸರಬರಾಜುದಾರರ ಬ್ಯಾಂಕ್ ಖಾತೆಗೆ ಆನ್‌ಲೈನ್ ಮೂಲಕ ಹಣ ಜಮಾ ಮಾಡಿದಿರುವ ಹಾಗೂ ಹಣ ಫೋರ್ಜರಿಯಾಗಿದ್ದರೂ ಕ್ರಮ ಕೈಗೊಳ್ಳದೇ ಕಾಮಗಾರಿಯನ್ನು ಸ್ಥಗಿತಗೊಳಿಸದೇ ಕರ್ತವ್ಯಲೋಪ ವೆಸಗಲಾಗಿದೆ ಎಂಬ ಆರೋಪ ನಿರಾಧಾರವಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ಆಪಾದಿತ ಅಧಿಕಾರಿ ಸಲ್ಲಿಸಿರುವ ದಿನಾಂಕ:15-07-2014 ರ ಲಿಖಿತ ಹೇಳಿಕೆಯ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಇವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಇವರ ಅಭಿಪ್ರಾಯ, ಆಪಾದಿತ ಅಧಿಕಾರಿಯು ಸಲ್ಲಿಸಿರುವ ದಿನಾಂಕ:15-07-2014ರ ಲಿಖಿತ ಹೇಳಿಕೆ ಹಾಗೂ ತತ್ಸಂಬಧಿತ ದಾಖಲಾತಿಗಳನ್ನು ಸರ್ಕಾರವು

ಕೂಲಂಕಷವಾಗಿ ಪರಿಶೀಲಿಸಿ, ಆಪಾದಿತ ಅಧಿಕಾರಿಯು ತಮ್ಮ ವಿರುದ್ಧದ ದೋಷಾರೋಪಣೆಗಳಿಗೆ ನೀಡಿರುವ ಸಮಜಾಯಿಷಿಯನ್ನು ಒಪ್ಪಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 123 ವಿಸೇಬಿ 2014 ಬೆಂಗಳೂರು, ದಿನಾಂಕ:06-05-2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ವೈ.ಎನ್.ರಂಗನಾಥ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಚಿತ್ರದುರ್ಗ ಇವರ ವಿರುದ್ಧದ ದಿನಾಂಕ: 11-06-2014 ರ ನೋಟೀಸಿನಲ್ಲಿ ಜಾರಿಗೊಳಿಸಿದ ಆರೋಪಗಳಿಗೆ ಸಂಬಂಧಿಸಿದಂತೆ ಅಧಿಕಾರಿಯು ಎಸಗಿರುವ ಕರ್ತವ್ಯಲೋಪಕ್ಕೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8(iii) ರನ್ವಯ, ಒಂದು ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷದ ಅವಧಿಗೆ ಸಂಚಿತ ಪರಿಣಾಮವಿಲ್ಲದಂತೆ (Without cumulative effect) ತಡೆಹಿಡಿಯುವ ದಂಡನೆ ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಹನುಮಂತಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸ ಸೌಧ,
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು
4) ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ,
5) ಶ್ರೀ ವೈ.ಎನ್.ರಂಗನಾಥ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕು ಪಂಚಾಯತಿ ಪಾವಗಡ, ತುಮಕೂರು ಜಿಲ್ಲೆ. ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಯೋಜನಾ ಉಪ ವಿಭಾಗ, ಚಿತ್ರದುರ್ಗ.
6) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) /ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
7) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
8) ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.